# ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಗಣಪತಿ ದುಮ್ಮಾ ಉಳ್ವೇಕರ್ ಇವರು ನಿಯಮ-72 ರ ಮೇರೆಗೆ ಮಂಡಿಸಿರುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಉತ್ತರ.**

**ವಿಷಯ: ಉತ್ತರ ಕನ್ನಡ ಜಿಲ್ಲೆಯಲ್ಲಿ ಇ-ಸ್ವತ್ತು ತಂತ್ರಾಂಶ ಮತ್ತು ನಿಯಮಗಳಿಂದಾಗಿ ಅನೇಕ ವರ್ಷಗಳಿಂದ ವಾಸವಾಗಿರುವ ಬಡ ಜನರಿಗೆ ನಮೂನೆ-9 & 11 ಪಡೆಯುವ ತೊಂದರೆ ಆಗುತ್ತಿದ್ದು, ಇದರಿಂದಾಗಿ ಆಸ್ತಿ ವಿಭಜನೆ, ಮಾರಾಟ, ನೋಂದಣಿಗೆ ತೊಂದರೆ ಆಗುತ್ತಿರುವ ಕುರಿತು ಹಾಗೂ ಜಿಲ್ಲೆಯ ಮೂಲ ಸಮಸ್ಯೆಗಳು, ಭೌಗೋಳಿಕ ಸನ್ನಿವೇಶವನ್ನು ಗಮನದಲ್ಲಿರಿಸಿಕೊಂಡು, ನಿಯಮ ಸರಳೀಕೃತಗೊಳಿಸುವ ಬಗ್ಗೆ.**

******

ಉತ್ತರ: ರಿಟ್ ಅರ್ಜಿ ಸಂಖ್ಯೆ: 12278/2007ರಲ್ಲಿ ಮಾನ್ಯ ಉಚ್ಚನ್ಯಾಯಾಲಯವು ನೀಡಿದ್ದ ನಿರ್ದೇಶನದನ್ವಯ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಅನಧಿಕೃತ ಆಸ್ತಿಗಳ ನೊಂದಣಿ, ಮಾರಾಟ ಮುಂತಾದ ವಹಿವಾಟುಗಳನ್ನು ತಡೆಗಟ್ಟುವ ಸಲುವಾಗಿ ಇ-ಸ್ವತ್ತು ತಂತ್ರಾಂಶ ರೂಪಿಸಿ ದಿನಾಂಕ:14-06-2013 ರಿಂದ ಜಾರಿಗೊಳಿಸಲಾಗಿದೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ಆಸ್ತಿ ವಿವರವನ್ನು ನಮೂನೆ-9 ರಲ್ಲಿ ಹಾಗೂ ಅಂತಹ ಆಸ್ತಿಯ ತೆರಿಗೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳನ್ನು ನಮೂನೆ-11ಎ ರಲ್ಲಿ ಮತ್ತು ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ-11ಬಿ ರಲ್ಲಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ತನ್ನ ಡಿಜಿಟಲ್ ಸಹಿಯ ಮೂಲಕ ಇ-ಸ್ವತ್ತು ತಂತ್ರಾಂಶದ ಮೂಲಕ ವಿತರಿಸಲು ಅನುವು ಮಾಡಕೊಡಲಾಗಿದೆ. ಈ ಉದ್ದೇಶಕ್ಕಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ಕ್ಕೆ ಅವಶ್ಯ ತಿದ್ದುಪಡಿಗಳನ್ನು ತರಲಾಗಿದೆ. ಇ-ಸ್ವತ್ತು ಅನುಷ್ಠಾನದ ಭಾಗವಾಗಿ ಹಲವಾರು ಸುತ್ತೋಲೆಗಳನ್ನು ಹೊರಡಿಸಲಾಗಿದೆ.

1) ಇ-ಸ್ವತ್ತು ತಂತ್ರಾಂಶದ ಜಾರಿಯಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

**(ಎ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಈ ಕೆಳಕಂಡ ಕ್ರಮಬದ್ಧ ಆಸ್ತಿಗಳಿಗೆ ಸಂಬಂಧಿಸಿದಂತೆ ಆಸ್ತಿ ವಿವರವನ್ನು ನಮೂನೆ 9 ರಲ್ಲಿ ಹಾಗೂ ಆ ಆಸ್ತಿಯ ತೆರಿಗೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳನ್ನು ನಮೂನೆ 11 ಎ ರಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ತನ್ನ ಡಿಜಿಟಲ್ ಸಹಿಯ ಮೂಲಕ ವಿತರಿಸುವರು.**

1. ಗ್ರಾಮ ಠಾಣಾ ಒಳಗಡೆ ಇರುವ ಆಸ್ತಿಗಳು.
2. ಕಂದಾಯ ಇಲಾಖೆಯಿಂದ ಭೂ ಪರಿವರ್ತನೆಯಾಗಿ ಸಕ್ಷಮ ಪ್ರಾಧಿಕಾರಗಳಿಂದ ಲೇಔಟ್ ಪ್ಲಾನ್ ಅನುಮೋದನೆಗೊಂಡಿರುವ ಆಸ್ತಿಗಳು.
3. ಸರ್ಕಾರದ ವಸತಿ ಯೋಜನೆಗಳಾದ ಬಸವ ವಸತಿ, ಗ್ರಾಮೀಣ ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಸೃಜಿಸರುವ ಆಸ್ತಿಗಳು.
4. ಏಕ ನಿವೇಶನ ನಕ್ಷೆ ಅನುಮೋದನೆಯಾಗಿರುವ ಆಸ್ತಿಗಳು (ಸಿಂಗಲ್ ಸೈಟ್ ಲೇಔಟ್ ಪ್ಲಾನ್ ಅಪ್ರೂವಲ್)
5. ಕೈಗಾರಿಕ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾದ ಆಸ್ತಿಗಳು.
6. ವಾಣಿಜ್ಯ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾಗಿರುವ ಆಸ್ತಿಗಳು

7. ಬಹು ಅಂತಸ್ತು ವಸತಿ ಸಮುಚ್ಚಯ (ಅಪಾರ್ಟ್‌ಮೆಂಟ್) – ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾಗಿರುವ ಆಸ್ತಿಗಳು.
8. ದಿನಾಂಕ:16-11-1992 ಕ್ಕಿಂತ ಪೂರ್ವದಲ್ಲಿ ಮಂಡಲ / ಗ್ರಾಮ ಪಂಚಾಯತಿಗಳಿಂದ ಬಡಾವಣೆ ಎಂದು ಅನುಮೋದನೆಯಾಗಿರುವ ಆಸ್ತಿಗಳು.
9. ದಿನಾಂಕ:11-11-2014 ರ ನಂತರ ತಾಲ್ಲೂಕು ಪಂಚಾಯತಿಗಳಿಂದ ಅನುಮೋದನೆಯಾಗಿರುವ ಬಡಾವಣೆ ಆಸ್ತಿಗಳು (ಒಂದು ಎಕರೆಗಿಂತ ಕಡಿಮೆ ವಿಸ್ತೀರ್ಣವಿದ್ದಲ್ಲಿ)
10. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ BDA, BMRDA, BIAAPA, KHB, KIADB, UDA's & LPA's ಅನುಮೋದಿಸಿದ ಬಡಾವಣೆಗಳಲ್ಲಿ ಬರುವ ಆಸ್ತಿಗಳು.

<u>(ಬಿ) ನಮೂನೆ 11-ಬಿ ಯಲ್ಲಿ ನೀಡಲಾಗುವ ಕ್ರಮಬದ್ಧವಲ್ಲದ ಆಸ್ತಿಗಳು:-</u>

ಇ-ಸ್ವತ್ತು ತಂತ್ರಾಂಶ ಜಾರಿಯಿಂದ ಎದುರಾದ ಸಮಸ್ಯೆಗಳನ್ನು ನಿವಾರಿಸಲು ಕ್ರಮಬದ್ಧವಲ್ಲದ ಈ ಕೆಳಕಂಡ ಮಾದರಿಯ ಆಸ್ತಿಗಳಿಗೆ ಷರತ್ತು ವಿಧಿಸಿ ನಮೂನೆ 11-ಬಿ ಯನ್ನು ವಿತರಿಸಲು ಸಂಬಂಧಿಸಿದ ನಿಯಮಕ್ಕೆ ತಿದ್ದುಪಡಿ ತಂದು ದಿನಾಂಕ:21-01-2014 ರಂದು ಅಧಿಸೂಚನೆ ಹೊರಡಿಸಲಾಗಿದೆ.

1. ಕಂದಾಯ ಭೂಮಿಯಲ್ಲಿ ಮನೆ ನಿರ್ಮಿಸಿದ್ದರೆ ಪಹಣಿ ಪ್ರತಿ ಒದಗಿಸುವುದು.
2. ಮನೆ ನಿರ್ಮಿಸಿರುವುದಕ್ಕೆ ವಿದ್ಯುತ್ ಬಿಲ್ ಪಾವತಿಸಿರುವ ದೃಢೀಕರಣ ನೀಡುವುದು.
3. ಕಂದಾಯ ಭೂಮಿಯಲ್ಲಿ ಫಾರಂ ಹೌಸ್ ನಿರ್ಮಿಸಿದ್ದಲ್ಲಿ ಸಂಬಂಧಿಸಿದ ತಹಶೀಲ್ದಾರ್ / ರೆವೆನ್ಯೂ ಇನ್ಸ್‌ಪೆಕ್ಟರ್ ರವರಿಂದ ದೃಢೀಕರಣ ಪತ್ರ ನೀಡುವುದು.
4. ಭೂ ಪರಿವರ್ತನೆಯಾಗಿದ್ದು, ಲೇಔಟ್ ಅನುಮೋದನೆಯಾಗದಿದ್ದಲ್ಲಿ ಈಗಾಗಲೇ ದಿನಾಂಕ: 14-06-2013 ಕ್ಕಿಂತ ಮುಂಚೆ ಒಂದು, ಎರಡು ಅಥವಾ ಮೂರು ಬಾರಿ ಕ್ರಯವಾಗಿರುವ ನಿವೇಶನಗಳಿಗೆ ಸಂಬಂಧಿಸಿದ ಕ್ರಯ ಪತ್ರ ನೀಡುವುದು.
5. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 95(2) ರನ್ವಯ ತಹಶೀಲ್ದಾರ್‌ರವರು ನೀಡಿರುವ ಹಿಂಬರಹದ ಪ್ರತಿ ಒದಗಿಸುವುದು.

ಇಂತಹ ಪ್ರಕರಣಗಳಲ್ಲಿ ಕೋರಲಾದ ಮೇಲ್ಕಂಡ ಷರತ್ತುಗಳನ್ನು ಪೂರೈಸಿದಲ್ಲಿ ನಮೂನೆ-11ಬಿ ರಲ್ಲಿ ಮಾಹಿತಿ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ-11ಬಿ ಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಕೈಬರಹದಲ್ಲಿ ನೀಡಲು ತಿಳಿಸಲಾಗಿದೆ.

ಗ್ರಾಮೀಣ ಭಾಗದ ಆಸ್ತಿಗಳ ತಂತ್ರಾಂಶ ಇ-ಸ್ವತ್ತು ಹಾಗೂ ನಗರ ಆಸ್ತಿಗಳ ತಂತ್ರಾಂಶ ಇ-ಆಸ್ತಿ ಈ ಎರಡು ತಂತ್ರಾಂಶಗಳ ಅನುಷ್ಠಾನದಿಂದ ಉಂಟಾಗುತ್ತಿರುವ ಸಮಸ್ಯೆಗಳ ಕುರಿತು ಪರಿಶೀಲಿಸಿ ಪರಿಹಾರಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯ ಶಿಫಾರಸ್ಸುಗಳು ಬಂದ ನಂತರ ಅಗತ್ಯ ಕ್ರಮ ವಹಿಸಲಾಗುವುದು.

ಸಂಖ್ಯೆ: ಗ್ರಾಅಪ 162 ಗ್ರಾಪಂಅ 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.